# ಜಗ್ಗಣಕ್ಕನ ಜಗ್ಗಣಕ್ಕನ

## ತಮಟೆಗಿದು ಸಂಕ್ರಮಣ ಸಮಯ

‘ಆದಿಕರ್ನಾಟಕದವರ ವಾದ್ಯ’ ಎಂಬ ಹಣೆಪಟ್ಟಿಯಲ್ಲಿ ಮುಖ್ಯವಾಹಿನಿಯಿಂದ ದೂರವಿದ್ದ ತಮಟೆ ಇತ್ತೀಚಿನ ದಿನಗಳಲ್ಲಿ ಮುನ್ನೆಲೆಗೆ ಬರುತ್ತಿದೆ. ತಮಟೆ ಸದ್ದನ್ನು ಮುನ್ನೆಲೆಗೆ ತರುವ ಪ್ರಯತ್ನದಲ್ಲಿ ತೊಡಗಿಕೊಂಡಿರುವ ಕಲಾವಿದ ಭರತ್ ಡಿಂಗ್ರಿ, ತಮಟೆಯ ಸದ್ದಿನ ಹಿಂದಿರುವ ಹಲವು ಧ್ವನಿಗಳನ್ನು ‘ಸುಧಾ’ದೊಂದಿಗೆ ಹಂಚಿಕೊಂಡಿದ್ದಾರೆ.

■ ನಿರೂಪಣೆ:
**ರಾಘವೇಂದ್ರ ಕೆ. ತೊಗರ್ಸಿ**



ರಾಯಚೂರು ಜಿಲ್ಲೆಯ ಆಶಾಪೂರ ನಮ್ಮೂರು. ‘ಡಿಂಗ್ರಿ’ ಅನ್ನೋದು ನಮ್ಮ ಅಪ್ಪನಿಂದ ಬಂದ ಬಳುವಳಿ. ಅವರಿಗೆ ಅದು ಗೌರವದ ಪ್ರತೀಕ. ಅಪ್ಪನ ಹೆಸರು ನರಸಪ್ಪ, ಹೋರಾಟಗಾರ, ಬೀದಿ ನಾಟಕ ಮತ್ತು ಜನಪದ ಕಲಾವಿದ; ತಮಟೆ–ಕಂಜರ ನುಡಿಸುವ ಜೊತೆಗೆ ಹಾಡುಗಾರಿಕೆಯನ್ನೂ ಮಾಡುತ್ತಿದ್ದರು. ಬೆಳಗಾವಿಯಲ್ಲಿ ಹಾಡು ಹೇಳಿದಾಗ ಜಿಲ್ಲಾಧಿಕಾರಿಯೊಬ್ಬರು ‘ಡಿಂಗ್ರಿ ನರಸಪ್ಪ’ ಎಂದು ಕರೆದಿದ್ದರಂತೆ. ಅಂದಿನಿಂದ ನಮ್ಮ ಮನೆತನಕ್ಕೆ ಡಿಂಗ್ರಿ ಅಂಟಿಕೊಂಡಿದೆ.

ನಾನು ರಂಗಕರ್ಮಿ, ಗಾಯಕ, ತಬಲಾವಾದಕ ಕೂಡ. ಬಾಲ್ಯದಿಂದಲೂ ತಮಟೆಯ ನಂಟು ಮನೆತನದಿಂದ ಬೆಸೆದುಕೊಂಡಿದೆ. ವಾದ್ಯಗಳಲ್ಲಿ ಈ ತಮಟೆಗೆ ಮೇಲುಕೀಳಿನ ಅಂಟು ತಗುಲಿಕೊಂಡಿರುವುದರಿಂದ ಇದು ಕೆಲವರ ಪಾಲಿಗೆ ಅಸ್ಪೃಶ್ಯ ವಾದ್ಯವಾಗಿದೆ. ಆದರೆ, ಕಲೆಗಾರರ ಪಾಲಿಗೆ ತಮಟೆ ಜೀವಧ್ವನಿ. ಇದರ ಮೇಲಿನ ಪ್ರೀತಿ ಮತ್ತು ಕುತೂಹಲದ ಕಣ್ಣು ತಮಟೆಯ ಹೊಸ ಶೋಧಕ್ಕೆ ನನ್ನನ್ನು ಒಡ್ಡಿದೆ. ಅದರ ಮೂರ್ತರೂಪವೇ ‘ತಮಟೆ ಶಿಬಿರ’.

ತಮಟೆ ಮೂಲತಃ ಸಾಂಸ್ಕೃತಿಕ ದುಡಿಮೆಯ ಚರ್ಮವಾದ್ಯ. ಅದರ ನುಡಿಸಾಣಿಕೆಯ ಸ್ವರೂಪ ಮತ್ತು ಸಂದರ್ಭದಲ್ಲಿ ವೈವಿಧ್ಯ ಇದೆ. ಹೆಣದ ಮೆರವಣಿಗೆಗೆ ಮಿಡಿಯುವ ಜೊತೆಗೆ ದೇವರ ಉತ್ಸವ, ಹಬ್ಬ ಹರಿದಿನಗಳ ಸಂಭ್ರಮಕ್ಕೂ ತುಡಿಯುತ್ತದೆ. ಖುಷಿ ಮತ್ತು ದುಃಖ ಎರಡಕ್ಕೂ ಇದನ್ನು ಬಾರಿಸುತ್ತಾರೆ.

ತಮಟೆಯನ್ನು ಮುಖ್ಯವಾಹಿನಿಯ ವಾದ್ಯ ಎಂದು ಯಾಕೆ ಪರಿಗಣಿಸುತ್ತಿಲ್ಲ ಎನ್ನುವ ಪ್ರಶ್ನೆ ನನ್ನನ್ನು ಕಾಡುತ್ತಿದೆ. ತಬಲಾ, ಹಾರ್ಮೋನಿಯಂ, ಮೃದಂಗ, ವೀಣೆ, ವಯೊಲಿನ್ ಮಾದರಿಯಲ್ಲಿ ಏಕೆ ಇದು ಬೆಳೆದಿಲ್ಲ ಎನ್ನುವುದನ್ನೂ ವಿಚಾರ ಮಾಡಲೇಬೇಕು. ಅರೆ, ಚೌಡಕಿ, ತಮಟೆ ಕೆಳಸಮುದಾಯದ ವಾದ್ಯ ಪರಿಕರಗಳಾದರೆ ಮೃದಂಗ, ವೀಣೆ, ವಯೊಲಿನ್ ಮೇಲ್ವರ್ಗಕ್ಕೆ ಎನ್ನುವಂತೆ ಆಗಿದೆ. ತಬಲಾಕ್ಕೆ ಇರುವ ಚಾರಿತ್ರಿಕ ದಾಖಲೆ ತಮಟೆಗೆ ಇಲ್ಲ. ಅಂತಹ ಹಲಗೆಯನ್ನು ತುಂಬ ಹತ್ತಿರದಿಂದ ನೋಡುತ್ತಿದ್ದೇನೆ. ಒಂದು ಬಾಟಲಿ ಸಾರಾಯಿ ಇಲ್ಲವೇ ಐದು ಹತ್ತು ರೂಪಾಯಿಗೆ ಹಲಗೆ ಹೊಡೆಯುತ್ತಿದ್ದ ಜನ ಈಗಲೂ ಹಾಗೆಯೇ ಇದ್ದಾರೆ. ಹತ್ತು ಇಪ್ಪತ್ತರಿಂದ ನೂರು ಇನ್ನೂರಕ್ಕೆ ಏರಿದ್ದಾರೆ ಎನ್ನುವುದನ್ನು